**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 32/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.07**

**ದಿನಾಂಕಃ** 01.04.2026 **ಸಿಡಬ್ಲ್ಯೂ.11**

| | |
|---|---|
| ಹೆಸರು | ಬೀರೇಶ |
| ತಂದೆ ಹೆಸರು | ಏಳುಕೋಟೆಪ್ಪ |
| ವಯಸ್ಸು | 28 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಕುಣೆಬೆಳಕೆರೆ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.8 ರವರ ಪರಿಚಯವಿಲ್ಲ. ಆರೋಪಿತರ ಪರಿಚಯವಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದು ಆರೋಪಿ ತೋರಿಸಿದ ಸ್ಥಳ ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ.9 ಎಂದು ಸಾಕ್ಷಿಯ ಸಹಿಯನ್ನು ನಿಪಿ.9 (ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಈಗೆ 5 ವರ್ಷಗಳ ಹಿಂದೆ ಮಲೆಬೆನ್ನೂರು ಠಾಣೆಯಲ್ಲಿ ಮಾಡಿದ್ದೇನೆ. ಸದರಿ ಸಹಿಯನ್ನು ಕುಣೆಬೆಳಕೆರೆ ಗ್ರಾಮದಲ್ಲಿನ ಒಂದು ಮನೆಯಲ್ಲಿ ಬಂಗಾರ ಕಳ್ಳತನವಾದ ಬಗ್ಗೆ ಮಾಡಿರುತ್ತೇನೆ. ಸಾಕ್ಷಿಗೆ ಒಂದು ಛಾಯ ಚಿತ್ರ ತೋರಿಸಲಾಗಿ ಅದರಲ್ಲಿ ತಾನು ಇರುವುದಾಗಿ ಒಪ್ಪಿದ್ದು ಅದನ್ನು ಈಗಾಗಲೇ ನಿಪಿ.10 ಎಂದು ಗುರುತಿಸಲಾಗಿದೆ. ಸದರಿ ಛಾಯ ಚಿತ್ರವನ್ನು ಯಾವ ಸ್ಥಳದಲ್ಲಿ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ನಿಪಿ.9 ರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ 07.10.2021 ರಂದು ಕೊಂಡಜ್ಜಿ ಗ್ರಾಮದ ಸರಕಾರಿ ಶಾಲೆಯಲ್ಲಿ ಪೊಲೀಸರು ನನ್ನ ಹಾಗೂ ಚಾಸಾ 8 ರವರ ಸಮಕ್ಷಮ ನಿಪಿ.9 ರಂತೆ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ. ಸದರಿ ದಿನ ಪಂಚನಾಮೆಯನ್ನು ಮದ್ಯಾಹ್ನ 3.15 ರಿಂದ 4.00 ರವರೆಗೆ ಪಂಚನಾಮೆ ಜರುಗಿಸಿ ಛಾಯ ಚಿತ್ರ

ತೆಗೆದಿರುತ್ತಾರೆ ಎಂದರೆ ಸರಿ. ಈ ಎಲ್ಲಾ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಗುರುತಿಸಲು ನಿರಾಕರಿಸಿದ ಹೇಳಿಕೆಯನ್ನು ನಿಪಿ.14 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ತಿಳಿಸಿದ್ದರೂ ಸಹ ಆರೋಪಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎನ್ ಬಿ ವಕೀಲರಿಂದಃ**

ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಪೊಲೀಸರು ನನ್ನನ್ನು ಯಾವ ಊರಿಗೆ ಕರೆದುಕೊಂಡು ಹೋಗಿದ್ದರು ಹಾಗೂ ನನ್ನೊಂದಿಗೆ ಯಾರು ಯಾರು ಬಂದಿದ್ದರು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಯಾವ ಹೆಸರಿಗೆ ಆರೋಪಿತರನ್ನು ಯಾರು ಎಲ್ಲಿಗೆ ಕರೆದುಕೊಂಡು ಹೋಗಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನಿಪಿ.9 ರಲ್ಲಿ ಬರೆದಿರುವ ಅಂಶಗಳನ್ನು ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ. ಆರೋಪಿ ಹೆಸರು ಹಾಗೂ ಆತನ ಚಹರೆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

**ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ**

ಈ ಹಂತದಲ್ಲಿ 2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿದ್ದು ವಿನಂತಿ ಮೇರೆಗೆ ಅಳವಡಿಸಿಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ